ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :—

ಅ) ತುಂಗಾ ಮೇಲ್ದಂಡೆ ಯೋಜನೆಯ ರೂ.271.41 ಕೋಟಿಗಳ (1988-89ರ ದರಗಳಂತೆ) ಅಂದಾಜಿಗೆ ಸರ್ಕಾರ ಅನುಮೋದನೆ ನೀಡಿದೆ. ಇತ್ತೀಚೆಗೆ ಈ ಯೋಜನೆಯ ಪರಿಷ್ಕೃತ ಅಂದಾಜು ರೂ.915.35 ಕೋಟಿಗೆ ಮಾಡಲಾಗಿದೆ.

ಈ ಯೋಜನೆಯಡಿ ಜೂನ್ 2001 ವರೆಗೆ ಒಟ್ಟು 111.17 ಕೋಟಿಗಳು ಹಣ ಖರ್ಚು ಮಾಡಲಾಗಿದೆ. ಈ ಯೋಜನೆಯಿಂದ 1,98,900 ಎಕರೆ ನಿವ್ವಳ ಪ್ರದೇಶಕ್ಕೆ ನೀರು ಒದಗಿಸಲು ಯೋಜಿಸಲಾಗಿದೆ.

ಆ) ಈ ಯೋಜನೆಯಡಿ ಜೂನ್ 2001 ವರೆಗೆ ಒಟ್ಟು ರೂ.111.17 ಕೋಟಿಗಳಷ್ಟು ಹಣ ವೆಚ್ಚ ಮಾಡಲಾಗಿದೆ. ವರ್ಷವಾರು ವಿವರ ಈ ಕೆಳಗಿನಂತಿದೆ;

ಮಾರ್ಚ್ 97 ರವರೆಗೆ	-	16.12	ಕೋಟಿಗಳು
1997-98	-	10.34	ಕೋಟಿಗಳು
1998-99	-	4.05	"
1999-2000	-	10.82	"
2000-2001	-	49.36	"
2001-2002	-	20.48	"
ಜೂನ್ 2001ರವರೆಗೆ	-		
	-	111.17	ಕೋಟಿಗಳು

ಇ) ಈ ಯೋಜನೆಯಿಂದ 1,98, 900 ಎಕರೆ ನಿವ್ವಳ ಪ್ರದೇಶಕ್ಕೆ ನೀರಾವರಿ ಒದಗಿಸಲು ಉದ್ದೇಶಿಸಲಾಗಿದೆ ಮತ್ತು ಇದಕ್ಕೆ 12.24 ಟಿ.ಎಂ.ಸಿ. ನೀರು ಬೇಕಾಗುತ್ತದೆ.

It is proposed to irrigate 1,98,900 acres of net area, under this project and the quantity of water required is 12.24 tmc.

ಚೆನ್ನರಾಯ ಪಟ್ಟಣ ತಾಲ್ಲೂಕ ದಂಡಿಗನಹಳ್ಳಿ ಗ್ರಾಮದ ಶರಾಬು ಅಂಗಡಿ ಮುಚ್ಚುವುದು.

2347(2815) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಗ್ರಾಮದ ಮೂರು ಸ್ತ್ರಿಶಕ್ತಿ ಸಂಘಟನೆಗಳು ಈ ಗ್ರಾಮದಲ್ಲಿರುವ ಶರಾಬು ಅಂಗಡಿ ನಡೆಸಲು ಕೊಟ್ಟಿರುವ ಲೈಸೆನ್ಸನ್ನು ರದ್ದುಪಡಿಸುವಂತೆ ಕಳೆದ 3 ತಿಂಗಳಿಂದ ಚಳುವಳಿ ನಡೆಸುತ್ತಿರುವುದು ನಿಜವಲ್ಲವೆ?

ಅ) ದಂಡಿಗನಹಳ್ಳಿ ಗ್ರಾಮದ ಪಕ್ಕದಲ್ಲಿ ಜಲ್ಲಿ ಹೊಡೆಯುವ ಕ್ರಷರ್‌ನಲ್ಲಿ ಊರಿನ ಜನರೆಲ್ಲರೂ ಕೂಲಿ ಮಾಡುತ್ತಿದ್ದು, ಈ ಹಣವನ್ನೆಲ್ಲ ಶರಾಬು ಕುಡಿಯಲು ಗಂಡಸರು ಉಪಯೋಗಿಸುತ್ತಿದ್ದು ಇದರಿಂದ ಈ ಊರಿನ ಸ್ತ್ರೀಯರುಗಳಿಗೆ ಆಘಾತವಾಗಿದ್ದು, ಸಂಸಾರಗಳೇ ಹಾಳಾಗುತ್ತಿರುವುದು ನಿಜವಲ್ಲವೇ?

ಆ) ಈ ಗ್ರಾಮದ ಸ್ತ್ರೀಶಕ್ತಿ ಸಂಘಟನೆಯ ಹೆಂಗಸರುಗಳು ಗ್ರಾಮದ ಆರ್ಥಿಕಾಭಿವೃದ್ಧಿಗೆ ಹೆಚ್ಚು ಶ್ರಮಿಸುತ್ತಲಿದ್ದ ಕಾರಣ ಇವರಿಗೆ ಎಲ್ಲಾ ವಿಧವಾದ ಪ್ರೋತ್ಸಾಹವನ್ನು ಸರ್ಕಾರ ಕೊಡಬೇಕಾಗಿರುವುದು ನ್ಯಾಯ ಸಮ್ಮತವಲ್ಲವೇ?

ಈ) ಈ ದಿಶೆಯಲ್ಲಿ ಸರ್ಕಾರ ಕೈಗೊಳ್ಳಲಿರುವ ಕ್ರಮಗಳಾವುವು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಹೌದು

ಆ) ಇವು ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಹೌದು

ಈ) ಪ್ರೋತ್ಸಾಹಿಸುವ ಸಲುವಾಗಿ ಈ ಸಾಲಿನಲ್ಲಿ ಬಂಡಿಗನಹಳ್ಳಿ ಗ್ರಾಮದಲ್ಲಿ ಸಾರಾಯಿ ಅಂಗಡಿ ಸನ್ನದು ನೀಡಿರುವುದಿಲ್ಲ.

ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಪಡಿತರ ಪದಾರ್ಥಗಳನ್ನು ದುರುಪಯೋಗ ಮಾಡಿಕೊಂಡಿರುವುದು.

2348(2871) ಶ್ರೀ ಹನುಮೇಗೌಡ ಕೆ.ಹೆಚ್. (ಹಾಸನ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಸನ ವಿಧಾನ ಸಭಾ ಕ್ಷೇತ್ರದ ಕಸಬಾ ಕಟ್ಟಾಯ ಮತ್ತು ಶಾಂತಿಗ್ರಾಮ ಹೋಬಳಿಗಳಲ್ಲಿರುವ ನ್ಯಾಯಬೆಲೆ ಅಂಗಡಿಗಳ ಮಾಲೀಕರು ಪಡಿತರ ಪದಾರ್ಥಗಳನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ದೂರುಗಳು ಬಂದಿದೆಯೆ; (ವಿವರ ಒದಗಿಸುವುದು)

ಆ) ದೂರು ಬಂದಿರುವ ನ್ಯಾಯಬೆಲೆ ಅಂಗಡಿ ಮಾಲೀಕರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; ವಿವರ ನೀಡುವುದು)

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :—

ಅ) ಹೌದು.